ಕೋಲ ಹೀಗಿತ್ತು ಅಂತ ಗೊತ್ತಾಗಬೇಕಲ್ವಾ? ಅದಕ್ಕೆ ಹೀಗೆ ವೇಷ ಹಾಕಿ ನರ್ತಿಸಿದರೆ ಅದನ್ನು ನಾನು ರೆಕಾರ್ಡ್ ಮಾಡಿ ಯೂನಿವರ್ಸಿಟಿಯಲ್ಲಿ ಇಡಬಹುದು. ಅದರ ಬಗ್ಗೆ ಜನಪದ ಅಧ್ಯಯನ ಮಾಡಬಹುದು' ಅಂದಳು. ಮಾದನಿಗೆ ಅದು ಸರಿ ಕಾಣಲಿಲ್ಲ.

ಕೊನೆಗೂ ನವ್ಯ ಮಾದನಿಗೆ ಬೇರೆ ಕೆಲವು ಜನಪದ ನೃತ್ಯಗಳ ವಿಡಿಯೊಗಳನ್ನು ತೋರಿಸಿ ಹೇಗೆ ಮಾದ ವಿಶ್ವಪ್ರಸಿದ್ಧ ಆಗುತ್ತಾನೆ ಎಂದು ವಿವರಿಸಿದಳು. ಮಾದನ ಪಂಜುರ್ಲಿ ಕೋಲವನ್ನು ಅಧ್ಯಯನ ಮಾಡಲು ಜನರು ಆಸಕ್ತಿಯಿಂದ ಬರುತ್ತಾರೆ ಎಂದು ವಿವರಿಸಿದಳು. ವಿದೇಶಿ ಯೂನಿವರ್ಸಿಟಿಗಳು ಜಾನಪದ ಅಧ್ಯಯನಕ್ಕೆ ಸೀತಾಪುರಕ್ಕೆ ತಂಡ ಕಳುಹಿಸುವ ಸಾಧ್ಯತೆಯನ್ನೂ ಮನದಟ್ಟು ಮಾಡಿದಳು. ಮಾದನಿಗೆ ವಿದೇಶಕ್ಕೆ ಹೋಗುವ ಹಾಗೂ ಅಲ್ಲಿ ಪ್ರದರ್ಶನ ಕೊಡುವ ಭಾಗ್ಯ ಬರಬಹುದು ಎನ್ನುವ ಆಸೆಯನ್ನು ಅವನಲ್ಲಿ ಹುಟ್ಟಿಸಿದಳು.

ವಿದೇಶ ಸುತ್ತುವ ವಿಚಾರ ಮಾದನಿಗೆ ಬಹಳ ಇಷ್ಟವಾಯಿತು. ಆದರೂ ಆಶಾಳ ಎದುರು ಹೇಳಿಕೊಳ್ಳುವುದು ಅವನಿಗೆ ಸರಿ ಕಾಣಲಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಆಶಾ ಮನೆಯ ಒಳಗೆ ನಡೆದಳು. ಅವಳು ಹೋದ ಕೂಡಲೇ ಮಾದ ಮರುದಿನ ಪಂಜುರ್ಲಿ ವೇಷ ಹಾಕುವುದಾಗಿ ನವ್ಯಳಿಗೆ ಒಪ್ಪಿಗೆ ನೀಡಿದ. ಈ ವಿಷಯ ಊರಿನವರ ಗಮನಕ್ಕೆ ಬರಬಾರದೆಂಬ ಶರ್ತವನ್ನು ಒಡ್ಡಿದ.

ಆ ಹೊತ್ತಿಗೆ ಆನಂದಣ್ಣ ಅಲ್ಲಿಗೆ ಬಂದರು. 'ಬನ್ನಿ' ಎನ್ನುತ್ತಾ ಅವರು ನವ್ಯಳನ್ನು ತನ್ನ ಮನೆಗೆ ಕರೆದೊಯ್ದರು. ಮರುದಿನ ನವ್ಯ, ಶಾಸ್ತ್ರಿಗಳ ಮನೆ ಪಕ್ಕಕ್ಕೆ ಬಂದು ಮಾದನನ್ನು ಭೇಟಿ ಮಾಡಿದಳು. ಮಾದ ಶಾಸ್ತ್ರಿಗಳಿಗೆ ಏನೋ ಕಾರಣ ಹೇಳಿ ತಾನು ಈದಿನ ಬರಲಾಗುವುದಿಲ್ಲ ಅಂದ. ನಂತರ ಮಾದ ಮತ್ತು ನವ್ಯ ಒಂದು ನಿರ್ಜನ ಪ್ರದೇಶಕ್ಕೆ ಹೋದರು. ಮಾದ ಪಂಜುರ್ಲಿ ಕೋಲದ ವೇಷ ಭೂಷಣಗಳನ್ನು ಧರಿಸಿ ಮೈಮೇಲೆ ದೈವ ಬಂದಂತೆ ನಾಟಕ ಮಾಡಿದ. ನವ್ಯ ಅದನ್ನು ಚಿತ್ರೀಕರಿಸಿದಳು. ಮಾದನ ಇಂಟರ್‌ವ್ಯೂ ಕೂಡಾ ತೆಗೆದುಕೊಂಡಳು.

'ಒಂದು ಹಳ್ಳಿ ಎರಡು ತಿಂಗಳು' ಕಾರ್ಯಕ್ರಮದಲ್ಲಿ ಒಂದು ಸಂಪೂರ್ಣ ಸಂಚಿಕೆ ಮಾದನ ಹಾಗೂ ಪಂಜುರ್ಲಿಯ ಮೇಲೆ ಬಂತು. ಜನ ಈ ಸಂಪ್ರದಾಯವನ್ನು ಆಫ್ರಿಕಾದ ಕಾಡುಜನರ ಸಂಪ್ರದಾಯಕ್ಕೆ ಹೋಲಿಸಿದರು. ಕೆಲವರು ಜಗತ್ತಿನ ಬೇರೆ ಬೇರೆ ದ್ವೀಪಗಳಲ್ಲಿ ಇಂದಿಗೂ ಅಳಿದುಳಿದಿರುವ ಕೆಲವು ದೈವಾರಾಧನೆಗೆ ಹೋಲಿಸಿದರು. ಮಾದ ಮತ್ತು ಪಂಜುರ್ಲಿ ಕೋಲ ಇಡೀ ಜಗತ್ತಿಗೇ ಗೊತ್ತಾಗಿ ಹೋಯಿತು.

ಅದೇ ರೀತಿಯಲ್ಲಿ ಸೀತಾಪುರದ ಬಯೋಡೈವರ್ಸಿಟಿ ಬಗ್ಗೆಯೂ ಒಂದು ಸಂಪೂರ್ಣ ಸಂಚಿಕೆ ಬಂತು. ಸೀತಾಪುರದ ಕಾಡು, ಎಲ್ಲೂ ಕಾಣಸಿಗದ ಅಪರೂಪದ ಗಿಡ ಬಳ್ಳಿಗಳು, ವಿಚಿತ್ರ ಪ್ರಾಣಿಗಳು, ಹುಳ ಹುಪ್ಪಟೆಗಳು ಸಂಚಿಕೆಯಲ್ಲಿ ತೋರಿಬಂದುವು. ಜನಕ್ಕೆ ಸೀತಾಪುರ ಬಹಳ ಮಹತ್ವದ ಜೀವಂತ **ecosystem** ಅನಿಸಿತು.

ಬಂದ ಒಂದೇ ವಾರದಲ್ಲಿ ಹಲವಾರು ಪ್ರೋಗ್ರಾಮ್‌ಗಳನ್ನು ಮಾಡಿ ನವ್ಯ ಸಂದೇಶನನ್ನು ಹಿಂದೆ ಹಾಕಿದ್ದಳು. ಸೀತಾಪುರದ ಜನ ನವ್ಯಳ ಹಿಂದೆ ಮುಂದೆ ತಿರುಗತೊಡಗಿದರು. ನವ್ಯ ಹೋದದಲ್ಲೆಲ್ಲಾ ಜನ ಸೇರುತ್ತಿತ್ತು. ಊರ ಹುಡುಗರು ನವ್ಯಳ ಹಿಂದೆ ಅವಳು ಹೇಳಿದ್ದನ್ನು ಮಾಡುತ್ತಾ ಅವಳ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದರು. ಪ್ರಭಾಕರ ಇದನ್ನೆಲ್ಲಾ ಆಗಾಗ ತನ್ನ ಕ್ಯಾಮೆರಾದಲ್ಲಿ ಸೆರೆ ಹಿಡಿದು ಪ್ರಕಟಿಸತೊಡಗಿದ. ನವ್ಯ ಆಗಾಗ ಸಂಜಯನ ಹತ್ತಿರ ಬಂದು ಸಲಹೆ ಕೇಳುತ್ತಿದ್ದಳು. ಅವಳು ಸಂಜಯನ ಹಿಂದೆ ಮುಂದೆ ತಿರುಗುವಾಗ ಆಶಾ ಕಣ್ಣಂಚಿನಿಂದ ಇದನ್ನು ಗಮನಿಸುತ್ತಿದ್ದಳು.

ನವ್ಯ ಸಂಜಯನಲ್ಲಿ ತನ್ನ ಎಪಿಸೋಡ್‌ಗಳನ್ನು ಇನ್ನಷ್ಟು ಪ್ರಸಿದ್ಧ ಮಾಡಲು ಮನವಿ ಮಾಡಲು ಹೇಳಿದಳು. ಸಂಜಯ್ ತನ್ನ ಪ್ರೋಗ್ರಾಮ್‌ನಲ್ಲಿ ಒಂದು ಸೀತಾಪುರದ ಬಯೋಡೈವರ್ಸಿಟಿ ಅಧ್ಯಯನದ ಅವಶ್ಯಕತೆ ಹಾಗೂ ಭೂತದ ಕೋಲವೆನ್ನುವ ಜಾನಪದ ಕಲೆಯನ್ನು ಉಳಿಸುವ ಅವಶ್ಯಕತೆಯನ್ನು ವಿವರಿಸಿದ. ಈ ಬಗ್ಗೆ ಸಹಾಯ ಮಾಡುವಂತೆ ಇಡೀ ಜಗತ್ತಿಗೆ ತನ್ನ ಪ್ರೋಗ್ರಾಮ್ ಮುಖಾಂತರ ಮನವಿ ಮಾಡಿದ.

ಜರ್ಮನಿಯ ಒಂದು ಪ್ರಸಿದ್ಧ ವಿಶ್ವವಿದ್ಯಾನಿಲಯ ಭೂತದ ಕೋಲದ ಬಗ್ಗೆ ಅಧ್ಯಯನ ಮಾಡಲು ಮುಂದೆ ಬಂತು. ತನ್ನ ತಂಡವನ್ನು ಸೀತಾಪುರಕ್ಕೆ ಕಳುಹಿಸುವುದಾಗಿಯೂ ಮಾದನನ್ನು ಜರ್ಮನಿಗೆ ಕರೆಸಿಕೊಳ್ಳುವುದಾಗಿಯೂ ಹೇಳಿತು.

ಅದೇ ತರಹ ಹಲವಾರು ಸಂಘ ಸಂಸ್ಥೆಗಳು ಸೀತಾಪುರದ ಬಯೋಡೈವರ್ಸಿಟಿ ಅಧ್ಯಯನ ಮಾಡಲು ಮತ್ತು ಉಳಿಸಲು ಅದನ್ನು ಮುಂದೆ ಬಂದವು. ನವ್ಯಳಿಗೆ ಇದು ಮೊದಲ ಜಯವಾಗಿತ್ತು. ನವ್ಯಳ ಯಶಸ್ಸು ಕಂಡು ಸಂದೇಶ್ ಸ್ವಲ್ಪ ಕರುಬಿದ.

ಈ ನಡುವೆ ಸಂದೇಶ್ ಬಾಬಣ್ಣನ ಬಹಳ ದೊಡ್ಡ ಅಭಿಮಾನಿಯಾಗಿ ರೂಪುಗೊಂಡ. ದಿನವೂ ಸಂದೇಶ್ ಬಾಬಣ್ಣನ ಅಂಗಡಿಗೆ ಹೋಗಿ ಚಟ್ಟಂಬಡೆ ಮತ್ತು ಇತರ ತಿಂಡಿ ತಿನ್ನತೊಡಗಿದ. ಹಾಗೇ ಬಾಬಣ್ಣನ ತಿಂಡಿಗಳು ಹಾಗೂ ರೆಸಿಪಿಗಳು 'ಒಂದು ಹಳ್ಳಿ ಎರಡು ತಿಂಗಳು' ಕಾರ್ಯಕ್ರಮದಲ್ಲಿ ಪರಿಚಯಿಸಿ ಅವು ಮಿಂಚುವಂತೆ ಮಾಡಿದ. ಒಂದು ಪ್ರತ್ಯೇಕ ಸಂಚಿಕೆ ಸೀತಾಪುರದ ಅಡುಗೆಗಳ ಬಗ್ಗೆ ಅದರಲ್ಲೂ ಬಾಬಣ್ಣನ ಚಟ್ಟಂಬಡೆ ಬಗ್ಗೆ ಪ್ರಸಾರವಾದಾಗ, ಹಲವಾರು ದೊಡ್ಡ ಶೆಫ್‌ಗಳು ಸೀತಾಪುರದ ಪ್ರಭಾವಕ್ಕೆ ಒಳಗಾಗಿ ಸೀತಾಪುರ ಸ್ಟೈಲ್ ಚಟ್ಟಂಬಡೆಗೆ ಪ್ರಾರಂಭಿಸಿದರು. ಮುಂಬೈಯ ಪ್ರಸಿದ್ಧ ಹೋಟೆಲೊಂದು ಬಾಬಣ್ಣನನ್ನು ಮುಂಬೈಗೆ ಬರಲು ಆಹ್ವಾನಿಸಿ, ತಮ್ಮ ಸ್ಟಾರ್ ಹೋಟೆಲ್‌ನಲ್ಲಿ ಒಂದು ತಿಂಗಳ ಕಾಲ ಸೀತಾಪುರ ಸ್ಪೆಷಲ್ ಮಾಡಲು ಮುಂದಾದರು.

ಸಂದೇಶ್ ಸೀತಾಪುರದಲ್ಲಿ ತಿರುಗುವಾಗ ಹಳ್ಳಿಯ ಹೆಂಗಸರು ಹಾಡುವ ಪಾಡ್ದನದ ಹಾಡುಗಳನ್ನು ಕೇಳಿದ್ದ. ಆ ಹಾಡುಗಳನ್ನು ವಿಡಿಯೊ ಮಾಡಲು ಮುಂದಾದ. ಹೆಂಗಸರಿಗೆ ಚೆನ್ನಾಗಿ ಬಟ್ಟೆ ತೊಡಿಸಿ ಗದ್ದೆಗಳಿಗೆ ಕರಕೊಂಡು ಹೋಗಿ ಅಲ್ಲಿ ಸಹಜವಾದ ಕೃಷಿಯ ವಾತಾವರಣ ಇರುವಂತೆ ಮಾಡಿ ವಿಡಿಯೋಗಳನ್ನು ಸೃಷ್ಟಿಸಿದ. 'ಒಂದು ಹಳ್ಳಿ ಎರಡು ತಿಂಗಳು' ಕಾರ್ಯಕ್ರಮದಲ್ಲಿ ಈ ಹಾಡುಗಳು ಪ್ರದರ್ಶನಗೊಂಡವು. ಕೆಲವೇ ದಿನಗಳಲ್ಲಿ ಈ ಹಾಡುಗಳ ಲಯ ಜನರ ಮನಸ್ಸನ್ನು ತಟ್ಟಿತು. ಈ ಹಾಡುಗಳನ್ನು ಆಧರಿಸಿ ಬೇರೆ ಹಾಡುಗಳು ಸೃಷ್ಟಿಯಾದವು. ನೋಡ ನೋಡುತ್ತಿದ್ದಂತೆ ಸೀತಾಪುರದ ಪಾಡ್ದನ ವಿಶ್ವಪ್ರಸಿದ್ಧವಾಯಿತು. ಬೆಂಗಳೂರಿಂದ ಟಿ.ವಿ. ಕಂಪನಿಯೊಂದು ಸಂದೇಶ್‌ಗೆ ಫೋನ್ ಮಾಡಿ ಸೀತಾಪುರದ ಹೆಂಗಸರನ್ನು ಬಳಸಿಕೊಂಡು ಒಂದು ವಿಶೇಷ ಪಾಡ್ದನದ ಕಾರ್ಯಕ್ರಮವನ್ನು ನಡೆಸಿಬೇಕಾಗಿ ಕೇಳಿತು.

ಸಂದೇಶ್ ತಾನು ನವ್ಯಳಿಗಿಂತ ಏನೂ ಕಡಿಮೆ ಇಲ್ಲ ಎಂದು ತೋರಿಸಿಕೊಟ್ಟ. ಸಂಜಯ್ ಪ್ರತೀದಿನದ ಇಂಥ ಆಗುಹೋಗುಗಳ ಮೇಲ್ವಿಚಾರಣೆ ಮಾಡುತ್ತಿದ್ದ. ಪ್ರತೀ ಬೆಳಿಗ್ಗೆ ಸಂದೇಶ್ ಮತ್ತು ನವ್ಯ ಸಂಜಯನನ್ನು ಭೇಟಿ ಮಾಡಿ ಹಿಂದಿನ ದಿನ ತಾವು ಏನು ಮಾಡಿದ್ದೇವೆ ಹಾಗೂ ಈ ದಿನದ ತಮ್ಮ ಪ್ಲಾನ್ ಏನು ಎಂಬುದನ್ನು ವಿವರಿಸುತ್ತಿದ್ದರು. ಸಂಜಯನ ನಿರ್ದೇಶನದ ಮೇಲೆಗೆ ತಮ್ಮ ಕಾರ್ಯಕ್ರಮ ಸಿದ್ಧಪಡಿಸುತ್ತಿದ್ದರು.

ಒಂಬತ್ತು

ಸಂದೇಶ್ ಮತ್ತು ನವ್ಯ ಸೀತಾಪುರಕ್ಕೆ ಬಂದು ಈಗಾಗಲೇ ಎರಡು ವಾರಗಳು ಕಳೆದಿದ್ದವು. 'ಒಂದು ಹಳ್ಳಿ ಎರಡು ತಿಂಗಳು' ಕಾರ್ಯಕ್ರಮ ತನ್ನ ಆರನೇ ವಾರಕ್ಕೆ ಕಾಲಿಟ್ಟಿತ್ತು. ಸಂಜಯ್ ತನ್ನ ಕಾರ್ಯಕ್ರಮದ ಕೂಲಂಕಷ ಸಮೀಕ್ಷೆ ನಡೆಸಿದ್ದ. ಈವರೆಗಿನ ಸಾಧನೆ ಅವನಿಗೆ ಸಮಾಧಾನ ತಂದಿತ್ತು. ಕಾರ್ಯಕ್ರಮವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ಸಮಯ ಬಂದಿತ್ತು.

ಸಂಜಯ್ ಮರುದಿನ ಶೆಟ್ಟರ ಮನೆಯಲ್ಲಿ ಒಂದು ಮೀಟಿಂಗ್ ಕರೆದ. ಅದರಲ್ಲಿ ಶೆಟ್ಟರು ಮಾತ್ರವಲ್ಲದೆ ಆನಂದಣ್ಣ, ಪ್ರಭಾಕರ, ಸಂದೇಶ್, ಆಶಾ ಮತ್ತು ನವ್ಯ ಸೇರಿದರು.

ಸಂಜಯ್ ಶೆಟ್ಟರಲ್ಲಿ 'ಶೆಟ್ರೇ, ನಾವು ಸೀತಾಪುರದ ಜನಗಳನ್ನು, ಅದರಲ್ಲೂ ಯಾರು ಸೆಲ್ ಫೋನ್ ತೆಗೆದುಕೊಂಡಿದ್ದರೋ ಅವರನ್ನು ಸೇರಿಸುವ ಒಂದು ಸಭೆ ಕರೆಯಬೇಕು. ಅವರಿಗೆ ಸಂದೇಶ್ ಮತ್ತು ನವ್ಯ ಮಾಡಿದ ಸಾಧನೆಗಳನ್ನು ತಿಳಿಸುವ ಕಾಲ ಬಂದಿದೆ' ಅಂದ.

ಆನಂದಣ್ಣ ಆ ದಿನವೇ ದೇವಸ್ಥಾನದಲ್ಲಿ ಸಭೆ ಕರೆಯುವುದಾಗಿ ಹೇಳಿದರು. ಸಂಜಯ್ ಪ್ರಭಾಕರನನ್ನು ಕರೆದು ಸಭೆಯ ರೆಕಾರ್ಡಿಂಗ್ ಜಾಗ್ರತೆಯಾಗಿ ಮಾಡಲು ಹೇಳಿದ. ಹಾಗೆ ಸಭೆಯ ವಿಡಿಯೊವನ್ನೂ ವಿಶೇಷ ಕಾರ್ಯಕ್ರಮವಾಗಿ 'ಒಂದು ಹಳ್ಳಿ, ಎರಡು ತಿಂಗಳು' ಕಾರ್ಯಕ್ರಮದಲ್ಲಿ ತೋರಿಸುವ ನಿರ್ಧಾರ ಆಯ್ತು.

ಸಂಜೆ ದೇವಸ್ಥಾನ ಜನರಿಂದ ಕಿಕ್ಕಿರಿಯಿತು. ಸಭೆಯನ್ನು ಉದ್ದೇಶಿಸಿ ಶೆಟ್ಟರು ಮತ್ತು ಆನಂದಣ್ಣ ಮಾತಾಡಿದ ಮೇಲೆ ಸಂಜಯ್ ಪ್ರಾರಂಭಿಸಿದ.

'ಈ ದಿನ ಸಭೆ ಸೇರಿದ ಕಾರಣ ಎಲ್ಲರಿಗೂ ನಮ್ಮ ಊರಲ್ಲಿ ಆಗುತ್ತಿರುವ ಅಭಿವೃದ್ಧಿಯನ್ನು ನಾವು ತಿಳಿಸುವುದಾಗಿದೆ' ಎಂದು ಮೊದಲು ಹೇಳಿ,